ಸಂಸ್ಕೃತಿಯ ತಿರುಳು ತುಂಬಾ ಪ್ರಿಯವಾಯಿತು. ತನ್ನ ಮನೆಯೇ ಬೆಂದುಹೋಗುತ್ತಿದ್ದರೂ ತನ್ನ ಜೀವನಶೈಲಿಯನ್ನು ಬದಲಾಯಿಸಲು ಇಷ್ಟಪಡದ ಆ ಮೊಘಲನ ನಿಲುವನ್ನು ಅವರು ಮನದಲ್ಲಿಯೇ ಮೆಚ್ಚಿಕೊಂಡರು. 'ಶಾಸನಸಭೆಗೆ ಹೋಗುವಾಗ ನಾನು ಆಂಗ್ಲವೇಷದಲ್ಲಿಯೇ ಹೋಗಬೇಕೇ' ಎಂಬ ಪ್ರಶ್ನೆಗೂ ಅವರಿಗೆ ಆಗಲೇ ಉತ್ತರ ಸಿಕ್ಕಿಬಿಟ್ಟಿತು. 'ಇನ್ನು ಮೇಲೆ ನಾನು ಶಾಸನಸಭೆಗೆ ಹೋಗುವಾಗಲೂ ಕೋಟುಬೂಟುಗಳನ್ನು ತೊಡುವುದಿಲ್ಲ; ನನ್ನ ಸಂಸ್ಕೃತಿಗೆ ಸಹಜವಾದ ಚಾದರ, ಧೋತಿ, ಚಪ್ಪಲಿಗಳಲ್ಲಿಯೇ ಇರುತ್ತೇನೆ' ಎಂದು ನಿರ್ಧರಿಸಿದರು.

ಶ್ರೀರಾಮಕೃಷ್ಣ ಪರಮಹಂಸರು ಕೂಡ ವಿದ್ಯಾಸಾಗರರನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಅವರನ್ನು ಕಾಣಲೆಂದು ತಾವೇ ಖುದ್ದಾಗಿ ಅವರ ಬಂಗಲೆಗೆ ಹೋಗಿದ್ದರು. ಆ ಹೊತ್ತಿನಲ್ಲಿ ಪರಮಹಂಸರು ಆನಂದಭರಿತರಾಗಿ "ಆಹ! ಇಂದು ನಾನು ಸಾಗರಕ್ಕೇ ಬಂದು ಸೇರಿಬಿಟ್ಟಿದ್ದೇನೆ. ಇಲ್ಲಿಯವರೆಗೆ ಕಾಲುವೆ, ಜೌಗುಭೂಮಿ, ಅತಿ ಹೆಚ್ಚೆಂದರೆ ನದಿ – ಇವನ್ನು ನೋಡಿದ್ದೆ. ಆದರೆ ಸಾಗರವೇ ಇಂದು ನನ್ನ ಕಣ್ಣೆದುರಿಗೆ ಇದೆ" ಎಂದು ಹೇಳಿದರು. ವಿನೋದಪ್ರಿಯರಾದ ವಿದ್ಯಾಸಾಗರರು ಆಗ "ಹಾಗಾದರೆ ಇಲ್ಲಿಂದ ತೆಗೆದುಕೊಂಡು ಹೋಗಿ ಸ್ವಲ್ಪ ಉಪ್ಪು ನೀರನ್ನು" ಎಂದರು. ಅದಕ್ಕೆ ರಾಮಕೃಷ್ಣರು "ಇಲ್ಲ, ಇಲ್ಲ, ನಾನೇಕೆ ಉಪ್ಪುನೀರು ತೆಗೆದುಕೊಂಡು ಹೋಗಲಿ? ನೀನು ಅವಿದ್ಯೆಯ ಸಾಗರವೇನಲ್ಲ, ವಿದ್ಯೆಯ ಸಾಗರ. ನೀನು ಕ್ಷೀರಸಮುದ್ರ" ಎಂದು ಹೇಳಿದರು. ಪರಮಹಂಸರಿಂದ ವಿದ್ಯಾಸಾಗರರು ಹೀಗೆಲ್ಲ ಕೊಂಡಾಡಿಸಿಕೊಂಡರೆಂದರೆ ಅದೇನು ಸಾಮಾನ್ಯ ಸಂಗತಿಯೆ !

## ಅಭಯದಾತೆ ಶ್ರೀಮಾತೆ



ಒಬ್ಬ ಸಂನ್ಯಾಸೀ ಶಿಷ್ಯ ಶ್ರೀಮಾತೆಗೆ ತುಂಬಾ ನಿರಾಸೆಯಿಂದ ಕಾಗದ ಬರೆದಿದ್ದ. ಅದರ ವಿಷಯ ವನ್ನು ಕೇಳಿದ ಶ್ರೀಮಾತೆ ದೃಢ ಗಂಭೀರವಾಣಿಯಿಂದ, "ಅದು ಹೇಗೆ ಸಾಧ್ಯ? ಶ್ರೀಗುರುದೇವರ ಹೆಸರು ಕೆಲಸಕ್ಕೆ ಬಾರದುದೆ? ಯಾರು ಇಲ್ಲಿಗೆ ಬಂದು ಅವರನ್ನು ಕುರಿತು ಯೋಚಿಸುತ್ತಾರೆಯೋ ಅವರು ಒಂದಲ್ಲ ಒಂದು ದಿನ ತಮ್ಮ ಇಷ್ಟದೈವವನ್ನು ನೋಡಿಯೇ ನೋಡುತ್ತಾರೆ. ಬದುಕಿರುವ ಕಾಲದಲ್ಲಿ ಅದು ಸಾಧ್ಯವಿಲ್ಲದೇ ಇದ್ದರೂ ಅಂತ್ಯಕಾಲದಲ್ಲಾದರೂ ಅವರು ಆತನನ್ನು ನೋಡುವರು" ಎಂದರು.

*('ಶ್ರೀಶಾರದಾದೇವಿ ಸಂಭಾಷಣೆ' ಗ್ರಂಥದಿಂದ, ಪು.೧೭೩)*

